(ii) ಐ. ಟಿ. ಐ. ತಾಂತ್ರಿಕ ಜ್ಞಾನವಿರುವ ವಿದ್ಯಾಸಂಸ್ಥೆಗಳಲ್ಲಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಉಪಾಧ್ಯಕ್ಷರೇ, ಐ. ಟಿ. ಐ. ತಾಂತ್ರಿಕ ಜ್ಞಾನ ವಿರುವ ವಿದ್ಯಾ ಸಂಸ್ಥೆಗಳಲ್ಲಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡುವ ಬಗ್ಗೆ ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಮಂತ್ರಿಯವರು).—ಮಾನ್ಯ ಉಪಾಧ್ಯಕ್ಷಣಿಯವರೇ, ನನ್ನ ಹೇಳಿಕೆಯನ್ನು ಓದುತ್ತೇನೆ.

ರಾಜ್ಯದ ಸರ್ಕಾರಿ ಮತ್ತು ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರತಿ ವರ್ಷವು ಐ.ಟಿ.ಐ. ಪ್ರವೇಶಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆಮಾಡಿಕೊಳ್ಳಲಾಗುತ್ತಿದೆ. ಐ.ಟಿ.ಐ ಪ್ರವೇಶಕ್ಕಾಗಿ ಆಯ್ಕೆ ಸಮಿತಿಯನ್ನು ರಚಿಸಿದ್ದು ಪ್ರಸ್ತುತಃ ಜಾರಿಯಲ್ಲಿರುತ್ತದೆ. ಸದರಿ ತರಬೇತಿಗೆ ಪ್ರವೇಶ ಪಡೆಯಲು ಸರ್ಕಾರಿ ಆದೇಶ ಕ್ರಮಾಂಕ : ಎಸ್‌ಡಬ್ಲ್ಯೂಎಲ್ ೯೧ ಇಟಿಐ ೮೬. ದಿನಾಂಕ ೨೬-೬-೮೬ರಲ್ಲಿ ಕೆಲವು ನಿಯಮಗಳನ್ನು ಗೊತ್ತುಪಡಿಸಿದೆ. ಅದರ ಪ್ರಕಾರ ಮೀಸಲಿರಿಸಿದ ಸ್ಥಾನಗಳು ಪ್ರತಿ ವರ್ಗಾವಾರು ಈ ಕೆಳಕಂಡಂತಿದೆ.

ಜಿ.ಎಂ.	— ೨೫½%	ಎಸ್.ಸಿ.	— ೧೫%	ಎಸ್.ಟಿ.	— ೩%
ಬಿ.ಸಿ.ಎಂ.	— ೨೧ %	ಬಿ.ಸಿ.ಟಿ.	— ೧೦%	ಬಿ.ಟಿ.	— ೫%
ಬಿ ಎಸ್.ಜಿ.	— ೧೫ %	ಎಕ್ಸ್ ಸರ್ವೀಸ್	— ೨½%	ಅಂಗವಿಕಲ	— ೨%
ಬಾಂಡೆಡ್ ಲೇಬರ್	— ೨				

ಈ ಮೇಲ್ಕಂಡ ಮೀಸಲಾತಿಯಲ್ಲಿ ಪ್ರತಿ ಅಭ್ಯರ್ಥಿಯು ಎಸ್.ಎಸ್.ಎಲ್.ಸಿ. ಯಲ್ಲಿ ತೇರ್ಗಡೆಯಾಗಿರಬೇಕಾಗಿರುತ್ತದೆ. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಸದರಿ ತರಬೇತಿ ಪ್ರವೇಶಕ್ಕಾಗಿ ಶೇಕಡ ೧೦ರಷ್ಟು ಸ್ಥಾನಗಳನ್ನು ಮೀಸಲಾಗಿರಿಸಿದೆ. ಇದಲ್ಲದೆ ಕೂಲಿಕಾರರ, ವ್ಯವಸಾಯಗಾರರ ಮತ್ತು ವ್ಯವಸಾಯ ಕೂಲಿಗಾರರ ಮಕ್ಕಳಿಗೆ ಸಂದರ್ಶನದಲ್ಲಿ ೩೫ ಅಂಕಗಳ ಪೈಕಿ ೧೫ ಅಂಕಗಳನ್ನು ವೀಸಲಾಗಿರಿಸಿದೆ. ಇತ್ತೀಚೆಗೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ ನಂತರ ಹಳ್ಳಿಯ ಮಕ್ಕಳಿಗೆ ೨೦ ಪರ್ಸೆಂಟ್ ತನಕ ಇದನ್ನು ಏರಿಸಬೇಕೆಂದು ನಿರ್ಣಯಿಸಿದೆ.

† ಶ್ರೀ ಕೆ. ಹೆಚ್. ಹನುಮೇಗೌಡ.—ಗ್ರಾಮಾಂತರ ಪ್ರದೇಶದಿಂದ ಹೆಚ್ಚುಕಡಿಮೆ ೮೦ ಪರ್ಸೆಂಟ್ ವಿದ್ಯಾರ್ಥಿಗಳು ಬರುತ್ತಾರೆ. ಟೌನ್‌ನಲ್ಲಿ ಓದತಕ್ಕ ವಿದ್ಯಾರ್ಥಿಗಳು convent ನಲ್ಲಿ ಓದಿ, ೭೦-೮೦-೯೦ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಳ್ಳುತ್ತಾರೆ. ಇವರ ಜೊತೆಯಲ್ಲಿ ಹಳ್ಳಿಯಲ್ಲಿ ಓದತಕ್ಕ ವಿದ್ಯಾರ್ಥಿಗಳು ಕಾಂಪಿಟ್ ಮಾಡುವುದು ಕಷ್ಟ. ಕಾರಣ ಏನೆಂದರೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಪರಿಸರಕ್ಕೂ, ಟೌನ್‌ನಲ್ಲಿರತಕ್ಕ ಪರಿಸರಕ್ಕೂ ಬಹಳ ವ್ಯತ್ಯಾಸ ಇದೆ. ನಾನೆ ನಾನು ಓದುವ ಶಾಲೆಗೆ ಹೋಗಿದ್ದೆ, ಅಲ್ಲಿ ಜೂನಿಯರ್ ಕಾಲೇಜ್ ಪ್ರಾರಂಭ ಮಾಡಿಸಬೇಕಾಗಿತ್ತು. ಅದಕ್ಕಾಗಿ ಹೋಗಿದ್ದೆ. ಅಲ್ಲಿಯ ಹೆಡ್‌ಮಾಸ್ಟರನ್ನು ಕೇಳಿದೆ, ಅವರು ಹೇಳಿದರು, ನಾವು ಪಾಠಮಾಡುವುದಿಲ್ಲವೆಂದು ಹೇಳುತ್ತೀರಿ, ನೋಡಿ ಹಳ್ಳಿಯಿಂದಬಂದಿರುವ ಹುಡುಗರು ಹೊರಗಡೆ ಕ್ರಿಕೆಟ್ ಆಡುತ್ತಿದ್ದಾರೆ, ಹೀಗಾದರೆ ನಾವು ಏನು ಮಾಡುವುದು ಎಂದು ಹೇಳಿದರು. ಶನಿವಾರ ಬೆಳಿಗ್ಗೆ ಒಂಭತ್ತೂವರೆ ಗಂಟೆಗೆ ಕ್ಲಾಸ್ ಬಿಟ್ಟು ಆಟವಾಡುತ್ತಿದ್ದಾರೆ ಎಂದರು ಅದಕ್ಕೆ ನಾನು, ನೀವು ಹೆಡ್‌ಮಾಸ್ಟರಾಗಿದ್ದು ಇದನ್ನು ಬಂದೊಬಸ್ತ್ ಮಾಡುವುದಕ್ಕಾಗುವುದಿಲ್ಲವೇ ಎಂದು ಕೇಳಿದ್ದಕ್ಕೆ, ಅವರು ಹೇಳಿದರು, ಏನಾದರೂ ಕ್ರಮ ತೆಗೆದುಕೊಳ್ಳುವುದಕ್ಕೆ ಹೋದರೆ ಕಲ್ಲು ಹೊಡೆಯುತ್ತಾರೆ ಎಂದು ಹೇಳಿದರು ಮೊದಲು ಗ್ರಾಮಾಂತರ ಪ್ರದೇಶದಿಂದ ಡಾಕ್ಟರುಗಳು, ಇಂಜಿನಿಯರುಗಳೂ ಬರುವ ಅವಕಾಶ ಇತ್ತು. ಫ್ರೀಪಾಸ್ ಕೊಟ್ಟಮೇಲೆ ಯಾವ ಹುಡುಗರೂ ಶಾಲೆಗೆ ಹೋಗುವುದಿಲ್ಲ, ಸರಿಯಾಗಿ ಓದುವುದಿಲ್ಲ. ಹಳ್ಳಿಗಳ ಕಡೆ ಮುಳಿಬೆಳಿ ಹೋಗಿ ಜೀವನಕ್ಕೇ ಕಷ್ಟವಾಗಿರುತ್ತದೆ. ಅಂಥಾದ್ದರಲ್ಲಿಯೂ ಅಲ್ಪಸ್ವಲ್ಪ ಖರ್ಚುಮಾಡಿ ಮಕ್ಕಳನ್ನು ಶಾಲೆಗೆ ಕಳುಹಿಸಿದರೆ, ಅಲ್ಲಿ ಇವರು ಓದುವುದಿಲ್ಲ. ಎರಡೂಮೂರು ಸಾರಿ ಪರೀಕ್ಷೆ ಕಟ್ಟಿ ೩೭-೪೦ ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಳ್ಳುತ್ತಾರೆ ಇಂತಹ ಪರಿಸ್ಥಿತಿಯಲ್ಲಿ ಮಕ್ಕಳು ಟೌನ್‌ನಲ್ಲಿ ಓದುತ್ತಿರತಕ್ಕ ಮಕ್ಕಳ ಜೊತೆಯಲ್ಲಿ ಕಾಂಪಿಟ್ ಮಾಡುವುದು ಕಷ್ಟವಾಗುತ್ತದೆ ನೀವು ಇಲ್ಲಿ ೫-೧೦-೧೫ ಪರ್ಸೆಂಟ್ ಎಂದು ಹೇಳುತ್ತೀರಿ. ಇದು ಸೂಕ್ತವಾದ ಪ್ರಾತಿನಿಧ್ಯವಾಗುವುದಿಲ್ಲ. ಹಳ್ಳಿಯ ವಿದ್ಯಾರ್ಥಿಗಳಿಗೆ ಮೆಡಿಕಲ್ ಕಾಲೇಜಿನಲ್ಲಿ, ಇಂಜಿನಿಯರಿಂಗ್ ಕಾಲೇಜಿನಲ್ಲಿ ಸೀಟು ಸಿಗುವುದಿಲ್ಲ. ಪಾಲಿಟೆಕ್ನಿಕ್, ಐ. ಟಿ. ಐ. ನಲ್ಲಾದರೂ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ, ರೈತರ ಮಕ್ಕಳಿಗೆ ಪ್ರಪೋರ್ಷನೇಟ್ ಪ್ರಾತಿನಿಧ್ಯ ಕೊಡದೇಹೋದರೆ ಅವರು ಎಲ್ಲಿಗೆ ಹೋಗಬೇಕು. ಹಳ್ಳಿಯ ರೈತರಿಗೆ

ಇರತಕ್ಕ ಜಮೀನಂ ಕಡಿವೆಂ ಇರುತ್ತದೆ, ಆದರಲ್ಲಿ ಕೂಲಿಕಾರರ ಮಕ್ಕಳೂ ಇರುತ್ತಾರೆ. ಇಂತಹವರಿಗೆ ತಾಂತ್ರಿಕ ಜ್ಞಾನವನ್ನು ಕೊಡತಕ್ಕ ಶಾಲೆಗಳಲ್ಲಿ ಅಡ್ಮಿಷನ್ ಸಿಕ್ಕದೇಹೋದರೆ, ಗತಿ ಏನು ? ಇದನ್ನು ಸರ್ಕಾರ ಯೋಚನೆ ಮಾಡಬೇಕು. ನೀವು ಕೊಡತಕ್ಕ ೫–೧೦ ಪರ್ಸೆಂಟ್ ಏನೇನೂ ಸಾಕಾಗುವುದಿಲ್ಲ. ಕೊನೆಯಪಕ್ಷ ಗ್ರಾಮಾಂತರ ಪ್ರದೇಶದ ಹಳ್ಳಿಯ ರೈತರ, ಕಾರ್ಮಿಕರ ಮತ್ತು ಕೂಲಿಕಾರರ ಮಕ್ಕಳಿಗೆ ಪ್ರಪೋರ್ಷನೇಟಾಗಿ ೬೦–೭೦ ಭಾಗ ಸೀಟುಗಳನ್ನು ರಿಸರ್ವ್ ಇಡಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಹನುಮೇಗೌಡರು ಒಂದು ಮಾತನ್ನು ಲಕ್ಷ್ಯದಲ್ಲಿಡಬೇಕು ಹಳ್ಳಿಯ ವಿದ್ಯಾರ್ಥಿಗಳನ್ನು ಪಟ್ಟಣದ ವಿದ್ಯಾರ್ಥಿಗಳೊಡನೆ ಕಂಪೇರ್ ಮಾಡುವುದಕ್ಕಾಗುವುದಿಲ್ಲವೆಂದು ಇವತ್ತು ೧೦ ಪರ್ಸೆಂಟ್ ಇದ್ದದ್ದನ್ನು, ೨೦ ಪರ್ಸೆಂಟ್ ರಿಸರ್ವೇಷನ್ ಮಾಡಬೇಕೆಂದು ಇದ್ದೇವೆ. ಇದರಿಂದ, ಹಳ್ಳಿಯಿಂದ ಬರತಕ್ಕ ಹರಿಜನ ಮಕ್ಕಳಿಗೂ ಸ್ಥಾನಗಳು ಸಿಗುತ್ತವೆ ಮತ್ತು ಬೇರೆವರ್ಗದ ಮಕ್ಕಳಿಗೂ ಅವಕಾಶ ಸಿಗುತ್ತದೆ. ಇದರಿಂದ ಸುಮಾರು ೧೦೦ಕ್ಕೆ ೭೦ ಭಾಗ ಇವರಿಗೇ ಅವಕಾಶ ಸಿಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಕೆ. ಹೆಚ್. ಹನುಮೇಗೌಡ.—೨೦ ಪರ್ಸೆಂಟ್ ರಿಸರ್ವೇಷನ್ ಇಡುತ್ತೇವೆಂದು ಹೇಳಿದ್ದಾರೆ. ಇದನ್ನು ಯಾವ ಆಧಾರದ ಮೇಲೆ ಮಾಡುತ್ತೀರಿ, ಪಹಣಿ ಅಥವಾ ಖಾತೆ ಆಧಾರದ ಮೇಲೆ ಮಾಡುತ್ತೀರಾ, ಯಾವರೀತಿ ನಿಗದಿ ಮಾಡುತ್ತೀರಿ ? ಎಸ್.ಸಿ /ಎಸ್.ಟಿ. ವಿಷಯದ ಬಗ್ಗೆ ನಾನು ಪ್ರಶ್ನೆ ಮಾಡುವುದಿಲ್ಲ. ಇವತ್ತು ಟೌನ್‌ನಲ್ಲಿರತಕ್ಕ ಎಸ್.ಸಿ./ಎಸ್.ಟಿ. ಮಕ್ಕಳ ಜೊತೆಯಲ್ಲಿಯೂ ಹಳ್ಳಿಯಿಂದ ಬರತಕ್ಕ ವಿದ್ಯಾರ್ಥಿಗಳು ಕಾಂಪೀಟ್ ಮಾಡುವುದಕ್ಕೆ ಸಾಧ್ಯವಿಲ್ಲ. ನೀವು ಏನು ೨೦ ಪರ್ಸೆಂಟ್ ರಿಸರ್ವೇಷನ್ ಇಟ್ಟಿದ್ದೇವೆಂದು ಹೇಳುತ್ತೀರಿ, ಇದೂ ಕೂಡ ಸಾಗುವುದಿಲ್ಲ. ಕೊನೆಯ ಪಕ್ಷ ೫೦ ಪರ್ಸೆಂಟ್ ಇಟ್ಟು, ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಮಕ್ಕಳಿಗೆ, ೨೦ ಅಂಕಗಳನ್ನು ಸಂದರ್ಶನದಲ್ಲಿ ಹೆಚ್ಚಿಗೆ ಕೊಟ್ಟು, ಇದನ್ನು ಸರಿದೂಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟಿಲ್.—ನಾನು ಈಗಾಗಲೇ ಹೇಳಿದೆ. ಆದರೂ ಸಹ ಹನುಮೇಗೌಡರು ಜೇಳುವ ಮಾತನ್ನು ಪರಿಶೀಲಿಸುತ್ತಿದ್ದೇನೆ. ಲೇಬರರ್ಸ್ ಮಕ್ಕಳಿಗೆ ಹೆಚ್ಚು ಮಾಡಬೇಕೆಂದು ಏನು ಕಾರ್ಯಕ್ರಮ ಹಾಕಿದ್ದೇವೆ,ಆದೇ ರೀತಿ ಹಳ್ಳಿಯ ಮಕ್ಕಳಿಗೂ ಸಹ ಹೆಚ್ಚು ಹಾಕುವುದಕ್ಕೆ ಬರುತ್ತದೆಯೇ ಎಂಬ ಬಗ್ಗೆ ಯೋಚನೆ ಮಾಡುತ್ತೇವೆ. ಯಾವ ಆಧಾರದ ಮೇಲೆ ಹಳ್ಳಿಯವನು ಎಂದು ಗುರುತಿಸುತ್ತೀರಿ ಎಂದು ಕೇಳಿದ್ದಾರೆ ಯಾವನು ಹಳ್ಳಿಯಲ್ಲಿ ವಾಸ ಮಾಡುತ್ತಾನೆ, ಯಾವನು ಹಳ್ಳಿಯಲ್ಲಿ ಕಲಿತಿದ್ದೇನೆಂದು ಸರ್ಟಿಫಿಕೇಟ್ ತರುತ್ತಾನೆ ಅವನು ಹಳ್ಳಿಯವನು. ಹಳ್ಳಿಯಿಂದ ಯಾರು ಬರುತ್ತಾರೆ ಅವರೆಲ್ಲರೂ ಹಳ್ಳಿಯವರೇ ಎಂದು ನಾವು ತಿಳಿಯುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಪಟ್ಟಣದವರೂ ಹಳ್ಳಿಯಲ್ಲಿದ್ದೇವೆ ಎಂದು ಸರ್ಟಿಫಿಕೇಟ್ ತರುತ್ತಾರೆ.

ಉಪಾಧ್ಯಕ್ಷರು.—ಹನುಮೇಗೌಡರೇ ಆಯಿತು, ಎರಡು ಮೂರು ಕ್ವಾಲಿಫಿಕೇಷನ್‌ಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಪಹಣಿ ಖಾತೆ ತರುವಂತಹ ವ್ಯವಸ್ಥೆ ಮಾಡುತ್ತೀರಾ ? ಟೌನ್‌ನಲ್ಲಿರುವವರೂ ಸರ್ಟಿಫಿಕೇಟ್ ತಂದು ಬಿಡುತ್ತಾರೆ.

ಉಪಾಧ್ಯಕ್ಷರು.—ಹನುಮೇಗೌಡರೇ ಇಲ್ಲ ಇನ್ನು ಹೆಚ್ಚು ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನೂ ಸಹ ಇದರ ಬಗ್ಗೆ ಕಾಲ್ ಅಟೆನ್‌ಷನ್ ಕಳುಹಿಸಿ ಇಟ್ಟಿದ್ದೆ. ಈ ಸಂದರ್ಭದಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥ ಸನ್ಮಾನ್ಯ ಸದಸ್ಯರಿಗೆ ಗ್ರಾಮೀಣ ಪ್ರದೇಶಗಳಿಂದ ವಿದ್ಯಾಭ್ಯಾಸ ಮಾಡಿಕೊಂಡು ಬಂದಿರತಕ್ಕಂಥ ಒಡಪರ ಸ್ಥಿತಿಗತಿಗಳನ್ನು ಹೇಳುವ ಅಗತ್ಯ ಇಲ್ಲ. ಒಂದೇ ಒಂದು ವಿನಂತಿ ಮಾಡಿಕೊಳ್ಳುವುದು ಎಂದರೆ, ಐ.ಟಿ.ಐ. ಮತ್ತು ಪಾಲಿಟೆಕ್ನಿಕ್ ಯಾವುದೇ ಆಗಲಿ, ಗ್ರಾಮೀಣ ಪ್ರದೇಶದಿಂದ ಬಂದಿರುವಂತಹವರಿಗೆ ಅವರು ತೆಗೆದುಕೊಂಡಿರತಕ್ಕಂಥ ಮಾರ್ಕ್ಸ್‌ಗೂ, ಆನುಕೂಲ ಇರುವ ಪಟ್ಟಣ ಪ್ರದೇಶದ ಮಕ್ಕಳು ತೆಗೆದುಕೊಂಡಿರತಕ್ಕಂಥ ಮಾರ್ಕ್ಸ್‌ಗೂ ಹೋಲಿಸಿ ನೋಡಿದಾಗ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಅವಕಾಶವೇ ಇರುತ್ತಿಲ್ಲ. ಬೇಕಾದರೆ ನೀವು ಅಂಕಿ ಅಂಶ ತೆಗೆದು ನೋಡಿ. ನಾವು ವಿನಂತಿ ಮಾಡುವುದು, ಕೊನೆಯ ಪಕ್ಷ ಇವರಿಗೆ ಒಂದು ೧೦ ಗ್ರೇನ್ಸ್ ಎಂದು ಹೇಳಿದರೆ ಐ.ಟಿ.ಐ .ಪಾಲಿಟೆಕ್ನಿಕ್ ಸೇರತಕ್ಕಂಥವರಿಗೆ ಇರುವ ಸ್ಪರ್ಧೆ ಅನುಕೂಲವಾಗುತ್ತದೆ.

ಶ್ರೀ ಕೆ.ಹೆಚ್. ಪಾಟೀಲ್.—ಪಾಲಿಟಿಕ್ಸ್‌ನಿಂದ ನನಗೆ ಸಂಬಂಧ ಇಲ್ಲ. ಅದು ಎಜುಕೇಷನ್ ಮಿನಿಸ್ಟರ್‌ಗೆ ಬರುತ್ತದೆ ಐ.ಟಿ.ಐ. ಒಳಗೆ ಅವರಿಗೆ, ಉಳಿದವರ ಮಾರ್ಕ್ಸ್‌ಗಿಂತ ಹೆಚ್ಚು ಮಾರ್ಕ್ಸ್ ಕೊಡಬೇಕೆಂದು ಆಲೋಚನೆ ಮಾಡುವುದಕ್ಕೆ ಹತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇದನ್ನು ಈ ವರ್ಷದಿಂದ ಜಾರಿಗೆ ಬರುವ ರೀತಿಯಲ್ಲಿ ತೀವ್ರವಾಗಿ ಕ್ರಮ ತೆಗೆದುಕೊಳ್ಳಿ.

ಶ್ರೀ ಕೆ.ಹೆಚ್. ಹನುಮೇಗೌಡ.—ಇದು ಐ.ಟಿ.ಐ.ಗೆ ಮಾತ್ರನೋ. ಪಾಲಿಟೆಕ್ನಿಕ್‌ಗೋ ಹೇಳಬೇಕು.

ನಿಯಮ ೩೩ಳಿರ ಮೇರೆಗೆ

೧. ಮೂಡಿಗೆರೆ ತಾಲ್ಲೂಕಿನ ಬಣಕಲ್‌ನಲ್ಲಿ ಬಸ್‌ಸ್ಟ್ಯಾಂಡ್ ನಿರ್ಮಾಣ

ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮೂಡಿಗೆರೆ ತಾಲ್ಲೂಕಿನ ಬಣಕಲ್‌ಗೆ ಕೆ.ಎಸ್.ಆರ್.ಟಿ.ಸಿ ಯಿಂದ ಬಸ್‌ಸ್ಟ್ಯಾಂಡ್ ಮಂಜೂರಾಗಿದ್ದು, ಬಸ್‌ಸ್ಟ್ಯಾಂಡ್ ಕಟ್ಟಲು ಹಣವೂ ಮಂಜೂರಾಗಿರುತ್ತದೆ. ಆದರೆ ಟೆಂಡರ್ ಕರೆದು ಕೆಲಸ ಪ್ರಾರಂಭ ಮಾಡಲು ಸರಕಾರಕ್ಕಿರುವ ತೊಂದರೆಯೇನು ? ತಡವೇಕಾಗಿದೆ, ದಯವಿಟ್ಟು ಸಾರಿಗೆ ಸಚಿವರು ತಿಳಿಸಬೇಕಾಗಿ ವಿನಂತಿ.

ಶ್ರೀ ಎಂ.ಎಸ್, ಆತ್ಮಾನಂದ (ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಬಣಕಲ್ ಗ್ರಾಮದಲ್ಲಿ ಬಸ್‌ನಿಲ್ದಾಣವನ್ನು ನಿರ್ಮಾಣ ಮಾಡಲು ೪ ಲಕ್ಷ ರೂ.ಗಳನ್ನು ೮೮-೮೯ರ ಆಯವ್ಯಯದಲ್ಲಿ ಅಳವಡಿಸಿ ಅಂದಾಜುಪಟ್ಟಿಗೆ ಮಂಜೂರಾತಿನೀಡಿ ಟೆಂಡರ್‌ನ್ನು ಕರೆಯಲಾಗಿತ್ತು. ಶ್ರೀ ವಿ.ವಿ. ಕೃಷ್ಣಕುಮಾರ್ ಎಂಬ ಗುತ್ತಿಗೆದಾರರಿಗೆ ಟೆಂಡರ್ ಒಪ್ಪಿಗೆಯನ್ನು ನೀಡಿ. ದಿನಾಂಕ ೧೭-೬-೮೯ ರಂದು ಕಾರ್ಯನಿರ್ವಾಹಕ ಅಭಿಯಂತರರು, ಬೆಂಗಳೂರು ಇವರಿಗೆ ತಿಳಿಸಲಾಯಿತು.

ಆದರೆ ವಿಭಾಗ ನಿಯಂತ್ರಣಾಧಿಕಾರಿಗಳು, ಹಾಸನ ಇವರು ಸಕಲೇಶಪುರದ ಘಟಕದಲ್ಲಿ ಕೆಲವು ಕಾಮಗಾರಿ ಕೆಲಸಗಳನ್ನು ಮಾಡಬೇಕಾಗಿರುವುದರಿಂದ. ಆಗಿನ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಿಗೆ ದಿನಾಂಕ ೮-೯-೮೯ ರಂದು ಪತ್ರ ಬರೆದು ಬಣಕಲ್ ಬಸ್ ನಿಲ್ದಾಣಕ್ಕೆ ಇರುವ ಹಣವನ್ನು ಸಕಲೇಶಪುರದ ಘಟಕದಲ್ಲಿ ಕೆಲವು ಕಾಮಗಾರಿ ಕೆಲಸಕ್ಕೆ ಉಪಯೋಗಿಸಿಕೊಳ್ಳುವಂತೆ ಮನವಿ ಮಾಡಿಕೊಂಡಿದ್ದರು.

ಈ ವಿಷಯವನ್ನು ಅಧ್ಯಕ್ಷರು ಪರಿಶೀಲಿಸಿ, ಸಕಲೇಶಪುರಕ್ಕೆ ಬೇಕಾದ ಹಣವನ್ನು ಮಂಜೂರು ಮಾಡಿ, ಬಣಕಲ್ ಬಸ್‌ನಿಲ್ದಾಣದ ಕಾಮಗಾರಿ ಕೆಲಸವನ್ನು ತೆಗೆದುಕೊಳ್ಳುವಂತೆ ಆದೇಶ ನೀಡಿದ್ದರು. ಅದರಂತೆ ವಿಭಾಗ ನಿಯಂತ್ರಣಾಧಿಕಾರಿಗಳು, ಹಾಸನ ಇವರಿಗೆ ಈ ವಿಷಯವನ್ನು ತಿಳಿಸಿ, ಬಣಕಲ್ ಕಾಮಗಾರಿ ಕೆಲಸವನ್ನು ಕೂಡಲೆ ಪ್ರಾರಂಭಿಸುವಂತೆ ದಿನಾಂಕ ೫-೯-೮೯ ರಂದು ಬರೆದು ಹಾಗೂ ಪ್ರತಿಯನ್ನು ಕಾರ್ಯನಿರ್ವಾಹಕ ಅಭಿಯಂತರರು, 'ಮೈಸೂರು ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು' ಹಾಸನ ಇವರಿಗೆ ಕಳುಹಿಸಿ ಕಾರ್ಯ ಆರಂಭಿಸುವಂತೆ ಆದೇಶ ನೀಡಲಾಗಿತ್ತು.

ಗುತ್ತಿಗೆದಾರರು ಹೆಚ್ಚಿನ ದರಗಳನ್ನು ಕೊಡಬೇಕೆಂದು ಪತ್ರ ಬರೆದು ಮನವಿ ಮಾಡಿಕೊಂಡಿದ್ದರಿಂದ, ಗುತ್ತಿಗೆದಾರರ ಮನವಿಯನ್ನು ಪರಿಶೀಲಿಸಲಾಗುತ್ತಿದೆ.

೧೧-೧೦ ಎ.ಎಂ.

೨) ಹಾಸನ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಾಡಿದ ಶಿಕ್ಷಕರ ವರ್ಗಾವಣೆಯ ಪಟ್ಟಿಗೆ ಜಿಲ್ಲಾ ಪರಿಷತ್ತು ಅಧ್ಯಕ್ಷರಿಂದ ತಡೆ

ಶ್ರೀ ಬಿ. ಶಿವರಾಮ್.—ಮಾನ್ಯ ಅಧ್ಯಕ್ಷಣಿಯವರೇ ಹಾಸನ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಾಡಿದ ಪ್ರಾಥಮಿಕ ಶಿಕ್ಷಕರ ವರ್ಗಾವಣೆ ಪಟ್ಟಿಗೆ ಹಾಸನ ಜಿಲ್ಲಾ ಪರಿಷತ್ತು ಅಧ್ಯಕ್ಷರು ದಿನಾಂಕ ೧-೬-೯೦ ರಂದು ತಡೆಯಾಜ್ಞೆ ಕೊಟ್ಟಿರುವುದು ಶಿಕ್ಷಕರಿಗೆ ಕೆಲಸದ ಮೇಲೆ ಹಾಜರಾಗಲು ಅವಕಾಶವಾಗಿರುವುದಿಲ್ಲ. ಅಲ್ಲದೆ ಕೆಲವು ಏಕ ಉಪಾಧ್ಯಾಯ ಶಾಲೆಗಳ ಮಕ್ಕಳಿಗೆ